GOVERNMENT OF KARNATAKA
KARNATAKA STATE PRE-UNIVERSITY EXAMINATION BOARD
2ND YEAR P U C EXAMINATION-JUN/JULY 2017
SCHEME OF VALUATION

Subject Code-01(N.S) Subject-KANNADA

## ಅ ವಿಭಾಗ

I ಎಲ್ಲಾ ಪ್ರಶ್ನೆಗಳಿಗೂ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ. 1x10=10

1) ಕೂಡಲಸಂಗಮದೇವಾ ಬಸವಣ್ಣನವರ ವಚನಗಳ ಅಂಕಿತ.
2) ಅರಿಷಡ್ವರ್ಗಗಳನ್ನು ಗೆದ್ದವರನ್ನು ಯೋಗಿ ಎನ್ನಬಹುದು.
3) ಬ್ಯಾಸಗಿ ದಿವಸಕ್ಕೆ ಬೇವಿನ ಮರ ತಂಪು.
4) ಮಗು ಹುಟ್ಟಿದ್ದು ಆಸ್ಪತ್ರೆಯಲ್ಲಿ.
5) ಬಸಲಿಂಗನಿಗೆ ಕಣ್ಣು ನೋವಿನ ತೊಂದರೆ ಕಾಣಿಸಿಕೊಂಡಿತು.
6) ವಾಲ್‌ಪರೈಗೆ ಬಂದ ಬ್ರಿಟಿಷ್ ಪ್ರಜೆ–ಕಾರ್ವೆರ್ ಮಾರ್ಷ್.
7) ಭಾಷೆ ಬದುಕಿಗಿಂತ ದೊಡ್ಡದು.
8) ಕೊಡಲಿಯು ಸುತ್ತಿಗೆ ಆಕಾರವನ್ನು ಪಡೆದಿತ್ತು.
9) ವೆಟರ್ನರಿ ಸ್ಟಾಕ್‌ಮನ್–ಪುಟ್ಟಯ್ಯ.
10) ಕಾಣೆಯಾಗಿರುವ ಆನೆ ಮತ್ತೆ ಊರಿಗೆ ಬಂದರೆ ಏನಪ್ಪಾ ಕತೆ ಎಂಬ ಕಳವಳ ಕಾಡತೊಡಗಿತು.

## ಆ ವಿಭಾಗ

II ಅ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x4=08

11) ಭೀಮನು ಮಲಗಿದ್ದ ಶಯ್ಯಾಗೃಹಕ್ಕೆ ಬಂದ ದ್ರೌಪದಿ, ಮೆಲ್ಲಮೆಲ್ಲನೆ ಆತನು ಹೊದ್ದು ಕೊಂಡಿದ್ದ ಮುಸುಕನ್ನು ಸಡಿಲಿಸಿದಳು, ಹಾಗೆಯೇ ಅವನ ಗಲ್ಲವನ್ನು ಹಿಡಿದು ಅಲುಗಾಡಿಸಿದಳು, ಆಗ ಭೀಮ ಗಾಬರಿಯಿಂದ ಎದ್ದನು.

12) ದುರ್ಜನರಿಂದ ಬೇರೆ ಯಾರಿಗೂ ಸ್ವಲ್ಪವಾದರೂ ಉಪಕಾರವಿಲ್ಲ, ಮೂಲಾಗ್ರ ಪರಿಯಂತ ಮುಳ್ಳು ಕೂಡಿರುವ ಜಾಲಿಯ ಮರದಂತೆ, ದುರ್ಜನರು ಸಜ್ಜನರಿಗೆ ನೋವನ್ನುಂಟು ಮಾಡುತ್ತಾರೆ. ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ ಇವರ ಕಾರ್ಯವಿರುತ್ತದೆ.

13) ಶಿಲುಬೆಗೇರಿಸಿದವರ ಗುಣಗಳು ಇಂದು ರೈಫಲ್ಲು–ಟ್ಯಾಂಕು, ಬಾಂಬು. ಗ್ರನೇಡುಗಳ ವೇಷ ತಾಳಿವೆ.

14) ದನಗಳಿಗೆ ಮೇವಿಲ್ಲ, ಜನಗಳಿಗೆ ನೀರಿಲ್ಲ ಹಾಗೂ ಗಂಜಿಗೂ ಗತಿಯಿಲ್ಲವಾಗಿದೆ.

15) ಹತ್ತಿಯ ಬೀಜದಂತೆ–ಚಿತ್ತ ಹತ್ತಿಯಾಗಿ, ಉರಿಯುವ ಬತ್ತಿಯಾಗಿ, ಬತ್ತಿಯನೆ ಸುಡುವ ತೈಲವೂ ಆಗಿ. ಹೊತ್ತಿ ಉರಿಯುವ ಬೆಳಕೂ ಆಗಿ ಮಾಗುವ ಜೀವದ ಪಯಣ ಸಾಗಿದೆ.

ಆ) ಯಾವೂದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x3=6

16) ಸೀತಾ ಓದಿನಲ್ಲಿ ಆಸಕ್ತಿ ತೋರಿಸಲಿಲ್ಲ. ಎಸ್.ಎಸ್.ಎಲ್.ಸಿ.ಯಲ್ಲಿ ಎಲ್ಲಾ ವಿಷಯಗಳಲ್ಲು ಫೇಲ್ ಆದಳು. ಮತ್ತೊಮ್ಮೆ ಕಟ್ಟುವ ತಾಪತ್ರಯಕ್ಕೆ ಹೋಗಲಿಲ್ಲ ಸದಾ ಯಾರಾದರೂ ಗೆಳತಿಯರನ್ನು ಜೊತೆ ಮಾಡಿಕೊಂಡು ಮಾರ್ಕೆಟ್ ಸಿನಿಮಾ ಎಂದು ಸುತ್ತಾಡುತ್ತಿದ್ದಳು.

17) ಮಳೆಗಾಲ ಬಂದರೆ ಸಾಕು ಈ ಬಿಕನಾಸಿ ಹೊಳೆ ಊರಿಡೀ ತನ್ನ ಸೆರಗನ್ನೇ ಹಾಸಿಬಿಡುತ್ತದೆ... ಎಷ್ಟಗಲ ಸೆರಗು ಹಾಸಿದರೂ ಇನ್ನಷ್ಟು ದೂರ ಹಾಸಬೇಕೆಂಬ ಚಟ ಇದಕ್ಕೆ ಎಂದು ಮೂದಲಿಸುತ್ತಿದ್ದರು.

18) ನೋಡಿ ಈ ಹಗಲಿನ ಹೊತ್ತು ಹೆಚ್ಚಾಗಿಯೇ ಇದೆ. ಹಗಲು–ಇರುಳು ಸೋನೆ ಮಳೆ ಜಿಟಿಜಿಟಿ ಸುರಿಯುತ್ತಿದೆ. ಹಾಗಾಗಿ ಮನಸ್ಸಿಗೆ ಬೇಸರವಾಗಿದೆ. ಒಂದು ಸಂತೋಷವಾಗುವ ಕಥೆ ಹೇಳಿ ಎಂದು ಮನೋರಮೆ ಕೇಳಿದಳು.

19) ಹಳ್ಳಿಯ ಚಹಾದ ಅಂಗಡಿಯೆಂದರೆ– ಇಳಕಲ್ಲ ಸೀರೆ ಉಟ್ಟು, ಗುಳೇದಗುಡ್ಡದ ಕುಬಸ ತೊಟ್ಟ ಹೆಣ್ಣಿದ್ದಂತೆ, ನೋಡಲು ಅಂದವಾಗಿರದಿದ್ದರೂ ಸ್ವರ್ಗಸುಖ ಕೊಡುವಂತಿರುತ್ತದೆ.

ಇ) ಯಾವೂದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x3=06

20) ದಿನದ ಇಪ್ಪತ್ತನಾಲ್ಕು ಗಂಟೆಯೂ ಕುಡಿದೇ ಇರುತ್ತಿದ್ದ ಈ ಮಾವುತ ಮಠದ ಸಾತ್ವಿಕ ವಾತಾವರಣಕ್ಕೆ ದೊಡ್ಡ ತಲೆನೋವಾಗಿದ್ದ, ಅಲ್ಲದೆ ಇವನ ದುರ್ನಡತೆಗಾಗಿ ಇವನಿಗೆ ಛೀಮಾರಿ ಹಾಕಿ ಓಡಿಸಿದಾಗ ಆನೆ ಅನೇಕ ದಿನಗಳವರೆಗೆ ಊಟವನ್ನೆ ವರ್ಜಿಸಿತ್ತು ಇದರಿಂದ ವೇಲಾಯುಧನನ್ನು ಮಠದಿಂದ ಸಾಗ ಹಾಕುವುದು ತ್ರಾಸದಾಯಕವಾಗಿತು.

21) "ಕೃಷ್ಣೇಗೌಡನ ಆನೆಯ ಮೇಲೆ ಅಯ್ಯಪ್ಪಸ್ವಾಮಿ ಪೋಟೋ ಇಟ್ಟು ಮೆರವಣಿಗೆ ಮಾಡುತ್ತಿದ್ದಾಗ, ಅದಕ್ಕೆ ಇದ್ದಕ್ಕಿದ್ದಂತೆ ತಲೆಕೆಟ್ಟು ಅಂಬಾರಿಸಮೇತ ಕಾಡಿಗೆ ಓಡಿಹೋಯಿತು." ಎಂಬ ವರ್ತಮಾನವನ್ನು ಕಾಡಪ್ಪಶೆಟ್ಟರು ಮುಟ್ಟಿಸಿದರು.

22) ದುರ್ಗಪ್ಪ ಮತ್ತೆ ಮತ್ತೆ, ನಾನು ಮರ ಕಡಿದಿಲ್ಲವೆಂದೂ, ಕೃಷ್ಣೇಗೌಡರ ಆನೆಯೇ ಮುರಿದು ಬೀಳಿಸಿದೆಯೆಂದು ಹೇಳಿದ್ದನ್ನು ಕೇಳಿದ ನಾಗರಾಜ "ಹಾಗಂತ ಹೇಳಿಕೆ ಬರ್ಕೊಡ್ತಿಯಾ? ಹಾಗಿದ್ರೆ ಹೇಳು ಅದನ್ನು ಎಳಕೊಂಡು ಬಂದು ಅಂಬಾಸಿಡರ್ ಕಾರಿನ ಜೊತೆ ಕಟ್ಟಾಕಿ ಬರೆ ಹಾಕಿ ಬಿಡ್ತೀನಿ, ನಿನ್ನ ಮಕಾರೇನಿದ್ರೂ ಬರ್ವಣಿಗೇಲಿ ಇರಬೇಕು. ಹಂಗ್ರಿದ್ರೆ ಮಾತ್ರ ನಾನು ಆಕ್ಷನ್ ತಗೋಳೋದು ಎಂದು ರೇಗಿದನು.

23) ನಾಗರಾಜ ಗಂಗಾಧರ ಗ್ಯಾಂಗಿನ ಕಾರನ್ನು ನಿಲ್ಲಿಸಿ ಒಳಗೆ ಏನಿದೆ ಎಂದು ಚೆಕ್ ಮಾಡಲು ಇಣುಕಿ ನೋಡಿದನಂತೆ ಒಳಗಿದ್ದ ಒಬ್ಬ ಖೇಡಿ ಅವನ ತಲೆಯನ್ನು ಹೊರಗೆಳೆದುಕೊಳ್ಳದಂತೆ ಜುಟ್ಟು ಹಿಡಿದು ಕಾರಿನ ಗಾಜನ್ನು ಏರಿಸಿ ಕುತ್ತಿಗೆ ಸಿಗಿಸಿದನಂತೆ. ವಿಲವಿಲ ಒದ್ದಾಡುತ್ತಿದ್ದ ನಾಗರಾಜನ ಸಮೇತ ಕಾರು ಚಾರ್ಮಡಿ ಕಡೆ ಹೋಗಿದ್ದನ್ನು ಜನ ನೋಡಿದರಂತೆ ಎಂದು ರಾಮಪ್ಪ ವಿವರಿಸಿದನು.

## ಇ – ವಿಭಾಗ

III ಅ)ಯಾವುದಾದರೂ ಎರಡು ವಾಕ್ಯಗಳ ಸಂದರ್ಭಸೂಚಿಸಿ ಸ್ವಾರಸ್ಯ ಬರೆಯಿರಿ 3x2=6

(ಕವಿ–ಕೃತಿ ಪದ್ಯದ ಪರಿಚಯ 01 ಅಂಕ:ಸಂದರ್ಭ: ವಿವರಣೆ: ಸ್ವಾರಸ್ಯ02. ಅಂಕಗಳು)

24) 'ಅಭಿನವಪಂಪ ನಾಗಚಂದ್ರ'ನ ಕೃತಿ 'ರಾಮಚಂದ್ರಚರಿತ ಪುರಾಣ'
'ಕದಡಿದ ಸಲಿಲಂ ತಿಳಿವಂದದೆ ಪದ್ಯದಿಂದ ಆಯ್ಕೆಮಾಡಿದೆ.

ಸಂದರ್ಭ. ರಾವಣನ ಮನಃಪರಿವರ್ತನೆಯ ಸ್ಥಿತಿಯನ್ನು ಕುರಿತು ಹೇಳಿದ ಸಂದರ್ಭ.
ವಿವರಣೆ:ರಾವಣನಿಗೆ ತನ್ನ ತಪ್ಪಿನ ಅರಿವಾಗಿ ತನ್ನೆಲ್ಲಾ ಸಿರಿಸಂಪತ್ತನ್ನು ತೃಣಕ್ಕೆ ಸಮಾನಾಗಿ ಕಂಡ ಈ ಸತಿಯನ್ನು ಏನೂ ಕಾರಣವಿಲ್ಲದೆ ಕಾಮಾಸಕ್ತಿಯಿಂದ ಈಕೆಯನ್ನು ರಾಮನಿಂದ ದೂರ ಮಾಡಿ ನನ್ನ ಕುಲದ ಹಿರಿಮೆಗೆ ಕಳಂಕವನ್ನು ತಂದುಕೊಂಡೆ, ಅಲ್ಲದೆ ಈಕೆಗೆ ದುಃಖವನ್ನು ಉಂಟುಮಾಡಿದೆ ಎನ್ನುತ್ತಾನೆ
ಸ್ವಾರಸ್ಯ: ಇಲ್ಲಿ ರಾವಣನ ಮನಃ ಪರಿವರ್ತನೆ ಹಾಗೂ ಪಶ್ಚಾತ್ತಾಪವನ್ನು ಕಾಣಬಹುದು.

25) 'ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ 'ಉರಿಲಿಂಗಪೆದ್ದಿಯ' ವಚನಗಳಿಂದ ಆಯ್ಕೆಮಾಡಿದೆ.

ಸಂದರ್ಭ: ಗುರು–ಅಲ್ಪವ್ಯಕ್ತಿತ್ವದ ವ್ಯಕ್ತಿಗಳ ಸ್ವಭಾವವನ್ನು ತಿಳಿಸುವ ಸಂದರ್ಭ.
ವಿವರಣೆ: ಗುರು ಗುರುವೇ,ಲಘು(ಅಲ್ಪರು) ಗುರುವಾಗಲು ಸಾಧ್ಯವಿಲ್ಲ ಗುರು ಗುರುವೇ ಲಘು–ಲಘುವೇ. ಇದನ್ನರಿಯದೆ ಲಿಂಗಜಂಗಮ ಪ್ರಸಾದದ ಮಹತ್ವವನ್ನು ಅಣಕಮಾಡಿ ತಾವೇ ಹಗುರವಾಗುತ್ತಾರೆ ಎನ್ನುತಾರೆ ವಚನಕಾರ.
ಸ್ವಾರಸ್ಯ: ತನ್ನ ಅಲ್ಪತನದಿಂದ ಅರಿಯದೆ ಆಡಿದಮಾತನ್ನು ಪುನರಾವಲೋಕನ ಮಾಡಿಕೊಳ್ಳುವ ಆತ್ಮವಿಮರ್ಶೆಯನ್ನು ಕಾಣಬಹುದು.

26) 'ಜನಪದ ಸಾಹಿತ್ಯ ಸಂಗ್ರಹ'ದಿಂದ ಆರಿಸಿಕೊಂಡಿರುವ 'ಹಬ್ಬಲಿ ಅವರ ರಸಬಳ್ಳಿ' ಎಂಬ ಪದ್ಯದಿಂದ ಆಯ್ಕೆಮಾಡಿದೆ.
ಸಂದರ್ಭ: ಹೆತ್ತತಾಯಿಯನ್ನು ಯಾವ ವೇಳೆಯಲ್ಲಿ ನೆನೆಯಬೇಕು, ಹಾಗೂ ಆಕೆಯನ್ನು ನೋಯಿಸಬಾರದು ಎಂದು ಅಕ್ಕ ತಮ್ಮನಿಗೆ ಬುದ್ಧಿ ಹೇಳಿದ ಸಂದರ್ಭ.
ವಿವರಣೆ: ಹೆತ್ತ ತಾಯಿಯನ್ನು ಬೈಬ್ಯಾಡ ತಿಳಿಗೇಡಿ ನನ್ನ ತಮ್ಮ, ಬಾಳವರ್ಷ ಬದುಕಿ ಬಾಳಿದವಳು ತುಂಬು ಜೀವನ ನಡೆಸಿದವಳು, ಅಂತಹ ಹಿರಿಯಾಕೆಯನ್ನು ಸುಖಾಸುಮ್ಮನೆ ಬೈದರೆ–ನೋಯಿಸಿದರೆ ಆಕೆ ಮನದಲ್ಲಿಯೇ ಮರುಗುತ್ತಾಳೆ ಸರಕಟಪಡುತ್ತಾಳೆ.
ಸ್ವಾರಸ್ಯ: ಹೆತ್ತವರನ್ನು ಸಂಕಟಕ್ಕೀಡುಮಾಡದೆ ಅವರನ್ನು ಗೌರವದಿಂದ ನೋಡಿಕೊಳ್ಳಬೇಕು ಎಂಬ ಸಂದೇಶವಿದೆ.

ಆ) ಯಾವುದಾದರೂ ಒಂದು ವಾಕ್ಯ ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: 3x1=3

27) ಕೃಪಾಕರ ಸೇನಾನಿ ಮತ್ತು ಕೆ. ಪುಟ್ಟಸ್ವಾಮಿ ಸೇರಿ ರಚಿಸಿರುವ 'ಜೀವಜಾಲ' ಎಂಬ ಕೃತಿಯಿಂದ ಆಯ್ಕೆ ಮಾಡಿದ 'ವಾಲ್‌ಪರ್ಯೆ ಅಭಿವೃದ್ಧಿ ತಂದ ದುರಂತ' ಎಂಬ ಲೇಖನದಿಂದ ಆಯ್ಕೆಮಾಡಿದೆ.
ಸಂದರ್ಭ : ವಿಷಲಿಂಗ್ ಥ್ರಷ್ ಎಂಬ ಹಕ್ಕಿಗಳಿಗೆ ಒದಗಿರುವ ಸಂಕಟ ಸ್ಥಿತಿಯನ್ನು ಹೇಳುವ ಸಂದರ್ಭ.

ವಿವರಣೆ:– ಮನುಷ್ಯರ ಸುಳಿವೇ ಇಲ್ಲದ ಕಾಡಾಗಿದ್ದ ವಾಲ್‌ಪರೈನಲ್ಲಿ ಈಗ ಯಂತ್ರಗಳ ಸದ್ದು, ಕಾರ್ಮಿಕರ ಮೆರವಣಿಗೆ ಇತರ ಕಾರಣಗಳಿಂದ ಅಲ್ಲಿ ಈಗ ಗಜಿಬಿಜಿ ವಾತಾವರಣ ಸೃಷ್ಟಿಯಾಗಿದೆ.

ಸ್ವಚ್ಛಂದವಾಗಿ ಪ್ರಕೃತಿಯ ಮಧ್ಯೆ ಬದುಕಿದ ವಿಷಲಿಂಗ್ ಹಕ್ಕಿಗಳು ಈಗ ಕೊಳಕು ಚರಂಡಿಗಳ ಕೊಳಚೆಯಲ್ಲಿ ನೆಲೆಸಿವೆ. ಇಂತಹ ಸಂಕಟದ ಮಧ್ಯೆಯೂ ಮುಂಜಾನೆ ಎದ್ದು ಕೂಗುತ್ತವೆ. ಹಾಡುತ್ತವೆ.

ಸ್ವಾರಸ್ಯ:– ಇಲ್ಲಿ ಪ್ರಕೃತಿಯ ನಾಶ ಹಾಗೂ ಜೀವ ಜಗತ್ತಿನ ಸಂಕಟ, ಅನಿವಾರ್ಯತೆಯನ್ನು ಬಿಂಬಿಸಲಾಗಿದೆ.

28) ಪ್ರಸ್ತುತ ವಾಕ್ಯವನ್ನು ಡಾ॥ ಹಾ.ಮಾ. ನಾಯಕರು ಬರೆದಿರುವ 'ಕನ್ನಡವನ್ನು ಕಟ್ಟುವ ಕೆಲಸ' ಎಂಬ ಗದ್ಯ ಭಾಗದಿಂದ ಆಯ್ಕೆ ಮಾಡಿದೆ.

ಸಂದರ್ಭ:– ನಮ್ಮ ವ್ಯಕ್ತಿತ್ವ ಬಹು ಎತ್ತರಕ್ಕೇರಲು ಇಂಗ್ಲಿಷ್ ಒಂದೇ ಅಲ್ಲ ಜಗತ್ತಿನ ಇನ್ನೂ ಹಲವು ಭಾಷೆಗಳ ಜ್ಞಾನ ನಮಗೆ ಬೇಕು ಎಂದು ಹೇಳುವ ಸಂದರ್ಭ.

ವಿವರಣೆ :– ನಮ್ಮ ಸಾರ್ವಜನಿಕ ಶಾಲೆಗಳ ಸ್ಥಿತಿಗಳು ಎಲ್ಲಿಯವರೆಗೆ ಸುಧಾರಣೆ ಗೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಕನ್ನಡವೂ ಸಹ ಶಿಕ್ಷಣದಲ್ಲಿ ಆಕರ್ಷಕವಾಗುವುದಿಲ್ಲ. ಅಲ್ಲದೆ ಸಾರ್ವಜನಿಕರು ಅನಿವಾರ್ಯವಾಗಿ ಖಾಸಗಿ ಉದ್ಯಮವಾದ ಇಂಗ್ಲಿಷ್ ಶಾಲೆಗಳ ಕಡೆ ಹೋಗುತ್ತಾರೆ. ಆದರೆ ಇಂಗ್ಲಿಷ್‌ವೊಂದೇ ಸರ್ವಸ್ವ ಅಲ್ಲ ಎಲ್ಲಾ ಭಾಷೆಗಳ ಪರಿಚಯಬೇಕು. ಆದರೆ ಯಾವುದು ಮುಖ್ಯ ಎಂಬುದು ಅಂದಿನ ಅಗತ್ಯವನ್ನು ಅವಲಂಬಿಸಿರುತ್ತದೆ.

ಸ್ವಾರಸ್ಯ:– ಇದೇ ಭಾಷೆ ಸಾಕು ಎನ್ನುವ ಸಂಕುಚಿತ ಧೋರಣೆ ಬೇಡ, ವಿಶಾಲ ಜಗತ್ತಿನ ಪರಿಚಯ ನಮಗೆ ಬೇಕು ಎಂಬ ಅಂಶವನ್ನು ಕಾಣಬಹುದು.

ಇ) ಯಾವುದಾರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 3x1=3

29) ಪಂಪಪ್ರಶಸ್ತಿ ಪುರಸ್ಕೃತರಾದ 'ಪೂರ್ಣಚಂದ್ರ ತೇಜಸ್ವಿಯವರ' ಕಿರಗೂರಿನ ಗಯ್ಯಾಳಿಗಳು ಎಂಬ ಕೃತಿಯಿಂದ ಆಯ್ಕೆಮಾಡಿದ 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ಕೆಮಾಡಿದೆ.

ಸಂದರ್ಭ:– ಕರಂಟ್‌ಲೈನ್‌ಮನ್ ದುರ್ಗಪ್ಪ ನಿರೂಪಕರ ಬಳಿಗೆ ಬಂದು ಕೊಡಲಿ ಕೇಳುವ ಸಂದರ್ಭದಲ್ಲಿ ಲೇಖಕರಿಗೆ ಹೇಳಿದ ಮಾತು.

ವಿವರಣೆ:– ಕರಂಟಿನವರಿಗೆ ಕೊಡಲಿ ಯಾಕೆ ಎಂದಾಗ 'ಕೃಷ್ಣೇಗೌಡನ ಆನೆ' ಯಿಂದಾಗಿ ಒಂದು ಮರ ಮುರ್ಕೊಂಡು ತಂತಿ ಮೇಲೆ ಬಿದ್ದಿದೆ. ಲೈನ್ ಕ್ಲೀಯರ್ ಮಾಡಲು ಬೇಕು ಎನ್ನಲಾಗಿ ಆನೆಯದೇ ಆ ಕೆಲಸ ಎಂದು ಹೇಗೆ ಹೇಳುತ್ತಿಯ ಎಂದಾಗ ಈ ಮೇಲಿನ ಮಾತು ಆಡುತ್ತಾನೆ.

ಸ್ವಾರಸ್ಯ:– ಬೇರೆ ಯಾರೋ ಮಾಡಿರಬಹುದಾದ ಕೆಲಸಕ್ಕೆ ಮೂಕಪ್ರಾಣಿ ಆನೆಯ ಲದ್ದಿಯನ್ನೇ ಸಾಕ್ಷಿ ಮಾಡುವ ಮನುಷ್ಯನ ಹುನ್ನಾರದ ಬುದ್ದಿಯನ್ನು ಸೂಚಿಸುತ್ತದೆ.

30) ಪಂಪಪ್ರಶಸ್ತಿ ಪುರಸ್ಕೃತರಾದ 'ಪೂರ್ಣಚಂದ್ರ ತೇಜಸ್ವಿಯವರ' ಕಿರಗೂರಿನ ಗಯ್ಯಾಳಿಗಳು ಎಂಬ ಕೃತಿಯಿಂದ ಆಯ್ದ 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ಕೆಮಾಡಿದೆ.

ಸಂದರ್ಭ:– ಹಳೇ ಕೊಪ್ಪದ ಸುಬ್ಬಣ್ಣನ ಮನೆಯ ಹಿತ್ತಲಲ್ಲಿ ನಡೆದ ಘಟನೆಯಿಂದ ಕೋಪಗೊಂಡ ಸುಬ್ಬಣ್ಣ, ಅದಕ್ಕೆ ಕಾರಣವಾದ ಪ್ರಾಣಿಯನ್ನು ಗುರಿಯಾಗಿಟ್ಟುಕೊಂಡು ಬೈಯ್ಯುತ್ತಾ ಕೂಗಾಡುವ ಸಂದರ್ಭ.

ವಿವರಣೆ :– ರಾತ್ರಿ ಯವೂದೋ ಪ್ರಾಣಿ ಅವನ ಮನೆಯ ಹಿಂದಿನ ಕೊಟ್ಟಿಗೆಗೆ ನುಗ್ಗಿ ಕೊಟ್ಟಿಗೆಯ ಮಾಡು ಕುಸಿಯುವಂತೆ ಮಾಡಿ ಅಲ್ಲಿದ್ದ ಕೆಲವು ಮೇಕೆಗಳು ಸತ್ತಿದ್ದವು. ಇದನ್ನು ನೋಡಲು ಜನ

ಸೇರಿದಾಗ ಇದು ಕೃಷ್ಣೇಗೌಡನ ಆನೆಯದೇ ಕೆಲಸ ಎಂಬ ಆರೋಪ ಕೇಳಿ ಕೋಪಗೊಂಡ ಸುಬ್ಬಣ್ಣ ಈ ರೀತಿ ಆನೆಯನ್ನು ಬೈಯ್ಯುತ್ತಾನೆ.

ಸ್ವಾರಸ್ಯ:- ಸುಖಾ ಸುಮ್ಮನೆ ಆನೆಯ ಮೇಲೆ ಆರೋಪಮಾಡುವ ಜನ ಹಾಗೂ ಸುಬ್ಬಣ್ಣನ ಕೋಪದ ಸನ್ನಿವೇಶವನ್ನು ತಿಳಿಸುತ್ತದೆ.

## ಈ – ವಿಭಾಗ

IV ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ 4x3=12

31) 'ಕದಡಿದ ಸಲಿಲಂ ತಿಳಿವಂದದೆ' ಪದ್ಯದಲ್ಲಿ 'ಬಹುರೂಪಿಣಿ ವಿದ್ಯೆ' ಯನ್ನು ಒಲಿಸಿಕೊಂಡ ರಾವಣ ಪ್ರಮದ ವನದಲ್ಲಿದ್ದ ಸೀತೆಯನ್ನು ಕಾಣಲು ಬಂದಾಗ ಅವನ ರೂಪ ಸಂಪತ್ತನ್ನು ತೃಣಕ್ಕೆ ಸಮಾನವಾಗಿ ಕಾಣುತ್ತಾಳೆ. ಅಲ್ಲದೆ ಇವನಿಂದ ಮತ್ತಾವ ಕೆಟ್ಟಸುದ್ದಿಯನ್ನು ಕೇಳುತ್ತೇನೋ ಎಂಬ ಸಂಕಟಕ್ಕೆ ಒಳಗಾಗುತ್ತಾಳೆ. ಆಗ ರಾವಣ ರಾಮನ ದೆಸೆಯನ್ನು ಮರೆತು ಸಾಮ್ರಾಜ್ಯ ಸುಖವನ್ನು ಅನುಭವಿಸು ಎಂದಾಗ, ರಾಮ ಲಕ್ಷ್ಮಣರ ಆಯುಷ್ಯ-ಪ್ರಾಣದ ವರೆಗೂ ಬಾರದಿರು ಎಂದು ಹೇಳಿ ಮೂರ್ಛೆ ಹೋಗುತ್ತಾಳೆ.

ಈ ಸಂದರ್ಭದಲ್ಲಿ ಇದ್ದಕ್ಕಿದ್ದಹಾಗೆ ರಾವಣನಿಗೆ ತನ್ನ ತಪ್ಪಿನ ಅರಿವಾಗಿ ಪಶ್ಚಾತ್ತಾಪ ಪಡುತ್ತಾನೆ. ಕದಡಿದ ನೀರು ಸ್ವಲ್ಪ ಸಮಯದ ನಂತರ ತಿಳಿಯಾಗುವಂತೆ, ಸಂಧ್ಯಾಕಾಲದಲ್ಲಿ ಸೂರ್ಯನಿಗೆ ಅಂಟಿಕೊಂಡಿರುವ ಹೊಂಗಿರಣದ ಮೋಹ ನಂತರ ಇಲ್ಲವಾಗುವಂತೆ ರಾವಣನು ತನ್ನ ಕೆಟ್ಟ ಮನಸ್ಥಿತಿಯಿಂದ ಹೊರಬರುತ್ತಾನೆ.

32) 'ಪುಲಿಗೆರೆ ಸೋಮನಾಥ' ಕವಿಯ 'ಪಗೆಯಂ ಬಾಲಕನೆಂಬರೆ' ಎಂಬ ಪದ್ಯದಲ್ಲಿ ಯಾವುದು ವ್ಯರ್ಥ, ಯಾವುದು ಶ್ರೇಷ್ಠ ಎಂದು ಹೇಳುವ ಸಂದರ್ಭದಲ್ಲಿ ï ಅನುಭವಿಸಲಿಕ್ಕೆ ಬಾರದ ಹಣ, ಸಂಪತ್ತು ಎಷ್ಟಿದ್ದರೇನು? ಮುಪ್ಪಿನಲ್ಲಿ ತಂದೆ ತಾಯಿಯರನ್ನು ಪೋಷಣೆ ಮಾಡದ ಮಗನಿದ್ದರೇನು? ಮಳೆ ಸಕಾಲಕ್ಕೆ ಬಾರದೆ ಬೆಳೆಯಲ್ಲಾ ಒಣಗಿದ ಮೇಲೆ ಎಷ್ಟೇ ಬಂದರೂ ಏನು ಪ್ರಯೋಜನವಿಲ್ಲ. ಕಷ್ಟ ಕಾಲದಲ್ಲಿ ಬಂದು ನೋಡದ ಬಂಧು ವರ್ಗಗಳು ಯಾರಿದ್ದರೇನು ಎಂದು ಹೇಳುತ್ತಾ- ಸರಿಯಾದ ಸಮಯಕ್ಕೆ ಒದಗಿ ಬಂದ ಸ್ವಲ್ಪವೇ ಸಹಾಯ ಅದು ಪರ್ವತಕ್ಕೆ (ಬಹಳ ದೊಡ್ಡದು) ಸಮಾನವಾದುದು ಎಂದು ಕವಿ ಹೇಳುತ್ತಾನೆ.

33) ಪ್ರಕೃತಿಯಿಂದ ದೂರಸರಿದ ಮಾನವ ನೆರೆಹೊರೆ-ಯಲ್ಲಿ, ಬಂಧುಬಳಗದವರಲ್ಲಿಯೂ ವಾತ್ಸಲ್ಯ ಮಮಕಾರಗಳನ್ನು ವ್ಯಕ್ತ ಪಡಿಸಲು ಆಗದ ಯಾಂತ್ರಿಕ ಬದುಕನ್ನು ರೂಪಿಸಿಕೊಂಡಿದ್ದಾನೆ. ಕವಿತೆಯ ಪ್ರಾರಂಭದಲ್ಲಿಯೇ ಮಗು ಹುಟ್ಟಿದ್ದು ಆಸ್ಪತ್ರೆಯಲ್ಲಿ, ಬೆಳೆದದ್ದು ವಾಹನಗಳಲ್ಲಿ, ಕುಡಿದದ್ದು ಬಾಟ್ಲಿ ಹಾಲು, ಕಲಿತದ್ದು ಸ್ಪರ್ಧಾ ಜಗತ್ತಿನಲ್ಲಿ ಹೇಗಾದರೂ ಮಾಡಿ ನೆಲೆ ಕಂಡುಕೊಳ್ಳ ಬೇಕು. ತಾಯಿ ಮಗುವಿಗೆ ಒಂದು ಚಿಕ್ಕ ಕೋಣೆಯಲ್ಲಿಯೇ ಜಗತ್ತಿನ ಪರಿಚಯ ಮಾಡಿಸುತ್ತಾಳೆ. ತಂದೆ ಕೆಮ್ಮಿನಿಂದಾಗಿ ರೋಗದ ಪ್ರಾಣಿಯಂತಾಗಿದ್ದಾನೆ. ಕಲಿತದ್ದು ಜಾಹೀರಾತು, ರೇಡಿಯೋ, ಸಿಲೋನ್ ವ್ಯಾಪಾರ ಹೀಗೆ ಬರಿ ವ್ಯಾವಹಾರಿಕ ಪಾಠ. ಜೀವನ ಯಾರದೋ ಕೈಕೆಳಗೆ ಜೀತದ ಎತ್ತಿನಂತೆ ದುಡಿಯುವುದು ಸಂಜೆ ಯಾವಾಗಲೋ ಮನೆಗೆ ಬಂದು ತೂಕಡಿಸುವ ಹೆಂಡತಿಯಿಂದ ಆರಿದ ಅನ್ನ ತಿಂದು ನೂರಾರು ಒತ್ತಡ-ನೋವುಗಳ ಮಧ್ಯೆ ತತ್ತರಿಸುತ್ತಾ ಮಲಗುವುದು.

34) ಮುಪ್ಪಿನಲ್ಲಿ ಜೊತೆಗಿರಬೇಕಾದ ಅಜ್ಜ ಅಜ್ಜಿ ಮಕ್ಕಳಿಂದಾಗಿ ಬೇರೆ-ಬೇರೆಯಾಗಿ ಕಳವಳ ಆತಂಕಕ್ಕೆ ಒಳಗಾಗುವ ಸನ್ನಿವೇಶ. ದೂರದ ಅಸ್ಸಾಂ ನಲ್ಲಿರುವ ಅಜ್ಜನೊಂದಿಗೆ ಫೋನಿನಲ್ಲಿ ಮಾತಾಡ ಬಯಸುವ

ಅಜ್ಜಿಗೆ ಮಗ ಸೊಸೆ ಎಲ್ಲಿ ಗದರುತ್ತಾರೋ ಎಂಬ ಭಯ. ಅಜ್ಜಿಯಾದರೂ ಕನ್ನಡನಾಡಿನಲ್ಲಿದ್ದಾಳೆ ಅಕ್ಕಪಕ್ಕದವರೊಡನೆ ಮಾತಾಡಿ ಬಾಯಿ ಚಪಲ ತೀರಿಸಿಕೊಳ್ಳುತ್ತಾಳೆ. ಅಜ್ಜನಿಗೆ ಈ ಅವಕಾಶವಿಲ್ಲ ಅನಾಥ ಸ್ಥಿತಿ ಅಜ್ಜನ ಸಂಕಟ ನೋಡಿ ಅಜ್ಜಿ ಅಳುತ್ತಾಳೆ ಮತ್ತೆ ಫೋನು ರಿಂಗ್ ಆಗುತ್ತಲೆ ಅತ್ಯಂತ ಆಯಾಸದಿಂದ ಮೆಟ್ಟಿಲೇರಿ ಮೊಮ್ಮಗಳನ್ನು ಕರೆಯುವ ಸಂದರ್ಭ ಅವಸರದಲ್ಲಿಯೇ ಬಂದ ಮೊಮ್ಮಗಳು ನಿರ್ಲಕ್ಷ್ಯದಿಂದ ನಡೆದುಕೊಳ್ಳುವುದು ಆ ನಂತರ ಅಜ್ಜಿ ಫೋನಿನ ಬಳಿಗೆ ಬಂದು ಮಾತಾಡಲು ಹವಣಿಸುವುದು ಆತಂಕ ಕಳವಳ ಸಂಕಟದ ಸ್ಥಿತಿ. ಕೊನೆಗೆ ಸೊಸೆಗೆ ಹೊರಗಿನ ಕೆಲಸ ಹೆಚ್ಚು ಹೊತ್ತು ಇರುವಂತೆ ಮಾಡಪ್ಪ ಗುಟ್ಟೇ ಮಲ್ಲಪ್ಪ ಎಂದು ದೇವರಲ್ಲಿ ಮೊರೆಯಿಡುವುದು. ಹೀಗೆ ಎಲ್ಲಾ ಇದ್ದು ಇಲ್ಲದಂತಹ ಸ್ಥಿತಿಯಲ್ಲಿ ಬದುಕುವುದು.

ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ 4x2=8

35) 'ಪಿ ಲಂಕೇಶ್' ರ 'ಮುಟ್ಟಿಸಿಕೊಂಡವನು' ಕಥೆಯಲ್ಲಿ ಬರುವ ಬಸಲಿಂಗನಿಗೆ ಸರ್ಕಾರಿ ಆಸ್ಪತ್ರೆಯ ಬಗ್ಗೆ ಇರುವ ತಿರಸ್ಕಾರದ ಮನೋಭಾವ, ಕಣ್ಣಿನ ಬೇನೆ ಜಾಸ್ತಿಯಾಗಿ ಅನಿವಾರ್ಯದ ಸ್ಥಿತಿ ಬಂದಾಗ ಸರ್ಕಾರಿ ಆಸ್ಪತ್ರೆಯ ಡಾ॥ ತಿಮ್ಮಪ್ಪನನ್ನ ಭೇಟಿ ಮಾಡುವುದು, ಅವರ ಬಳಿ ತನ್ನೆಲ್ಲಾ ಸಂಕಟಗಳನ್ನು ಹೇಳಿಕೊಳ್ಳುತ್ತಾನೆ. ಡಾ॥ ತಿಮ್ಮಪ್ಪ ಸಹನೆಯಿಂದಲೇ ಅದನ್ನೆಲ್ಲಾ ಕೇಳಿಸಿಕೊಂಡು ಅವನ ಒಪ್ಪಿಗೆಯ ಮೇರೆಗೆ ಕಣ್ಣಿಗೆ ಆಪರೇಷನ್ ಮಾಡಿ ಕೆಲವು ಸೂಚನೆಗಳನ್ನು ನೀಡುವುದು, ಬಸಲಿಂಗ ಮನೆಗೆ ಬಂದಾಗ ಹೇಗೋ ಏನೋ ಅವನ ಹೆಂಡತಿ ಸಿದ್ಲಿಂಗಿಗೆ ತಿಮ್ಮಪ್ಪನವರು ಹೊಲೆಯ ಜಾತಿಗೆ ಸೇರಿದ ವಿಷಯ ಗೊತ್ತಾಗಿ ಬಸಲಿಂಗನೊಡನೆ ರಾದ್ಧಾಂತ ಮಾಡಿ ಸೂತಕ ಪರಿಹರಿಸಿಕೊಳ್ಳಲು ಅವನ ಕಣ್ಣಿಗೆ ತಾಗದಂತೆ ತಲೆಯ ಮೇಲೆ ಬಿಸಿ ನೀರು ಹಾಕಿ ಸ್ನಾನ ಮಾಡಿಸುವ ಮೂಲಕ ಡಾ॥ ತಿಮ್ಮಪ್ಪ ನೀಡಿದ ಸಲಹೆ ಸೂಚನೆಗಳನ್ನು ಪಾಲಿಸಲಾಗಲಿಲ್ಲ.

36) ಎಂತಹ ಕಷ್ಟದ ಸಂದರ್ಭದಲ್ಲಿಯೂ ನಿರಾಸೆಯಾಗದೆ ಛಲದಿಂದ ಬದುಕನ್ನ ಎದುರಿಸಿ ಗೆಲ್ಲುವ 'ಆಯ್ಕೆಯಿದೆ ನಮ್ಮ ಕೈಯಲ್ಲೆ' ಎಂಬ ಪಾಠದಲ್ಲಿ ಬರುವ ಲೇಖಕಿಯ ಪತಿ ಕೀರ್ತಿಗೆ ಮೂತ್ರಪಿಂಡದಲ್ಲಿ ಕಲ್ಲು ಕಾಣಿಸಿಕೊಂಡ ಸಂದರ್ಭ– ಮೂತ್ರಪಿಂಡದಲ್ಲಿ ಕಲ್ಲು ಯಾಕೆ ಆಗುತ್ತೆ, ಮತ್ತು ಹಾಗೆ ಆದವರು ಏನು ಚಿಕಿತ್ಸೆ ಪಡೆದುಕೊಂಡಿದ್ದಾರೆ ಎಂದು ತಿಳಿದು ಕೊಳ್ಳಲು ಲೇಖಕಿಯು ಪ್ರಯತ್ನಿಸುತ್ತಾರೆ. ಕಮಲ ಮೇಡಂ ಮತ್ತು ಮುದ್ದೇ ಗೌಡರ ಅಭಿಪ್ರಾಯಗಳು, ಕೊನೆಗೆ ಕಮಲಮೇಡಂ ರೀತಿ ನೀರು ಕುಡಿದು ಖಾಯಿಲೆ ವಾಸಿ ಮಾಡಿಕೊಳ್ಳುವುದೆ? ಇಲ್ಲ ಮುದ್ದೆ ಗೌಡರಂತೆ ಆಪರೇಷನ್ ಮಾಡಿಸಿಕೊಳ್ಳಬೇಕೆ? ಕೊನೆಗೆ ಕಮಲಮೇಡಂ ರೀತಿ ಹೆಚ್ಚು ಹೆಚ್ಚು ನೀರು ಕುಡಿಯಲು ತೀರ್ಮಾನಿಸಿ ಪ್ರಯೋಗ ಮಾಡಿದರು ಆಗ ಮೂತ್ರಪಿಂಡದಲ್ಲಿನ ಕಲ್ಲು ಕರಗಿ ಹೋಯಿತು.

37) 'ಬದುಕನ್ನು ಪ್ರೀತಿಸಿದ ಸಂತ' ಲೇಖನದಲ್ಲಿ ಬರುವ ಡಾ॥ ಅಬ್ದುಲ್ ಕಲಾಂ' ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ಪ್ರಕಟವಾದಾಗ ಚೆನ್ನೈನಲ್ಲಿದ್ದರು. ಅಲ್ಲಿ ಕಲಾಂ ಅವರನ್ನು ಭೇಟಿಯಾದ ಮಕ್ಕಳು ಕೆಲವು ಪ್ರಶ್ನೆ ಕೇಳಿದರು ಕಲಾಂ ನೀಡಿದ ಉತ್ತರ – ಪ್ರತಿಯೊಬ್ಬನ ಯಶಸ್ಸಿನ ಮಂತ್ರ 'ಕುತೂಹಲ, ಆಲೋಚನ ಶಕ್ತಿ, ಜ್ಞಾನ, ಕಷ್ಟಪಟ್ಟು ಕೆಲಸ ಮಾಡುವುದು ಮತ್ತು ಗುರಿ ಸಾಧಿಸುವ ಛಲ' ಆನಂತರ ಕಲಾಂ ಅವರೇ ಲಕ್ಷಾಂತರ ಮಕ್ಕಳನ್ನು ಭೇಟಿ ಮಾಡಿ ಅವರು ಕೇಳುವ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ. ಬಡವರಾಗಿರಲಿ, ಶ್ರೀಮಂತರಾಗಿರಲಿ ಎಲ್ಲಾ ಮಕ್ಕಳ ಕನಸು ಒಂದೆ; ಅವರೆಲ್ಲರೂ ಶಾಂತಿ, ಸಮೃದ್ಧಿ ಮತ್ತು ಸುಭದ್ರ ಭಾರತದಲ್ಲಿ ಬದುಕಬಯಸುತ್ತಾರೆ. ಮಕ್ಕಳಿಗೆ ಅವರು ಯಾವಾಗಲೂ ಹೇಳುತ್ತಿದ್ದುದು ಒಂದೇ ಮಾತು ಎಲ್ಲವನ್ನು ಪ್ರಶ್ನಿಸಿ, ಪ್ರಶ್ನೆಗಳಿಂದ ವಿಕಾಸಗೊಂಡದ್ದೇ ವಿಜ್ಞಾನ. ಹೀಗೆ ಮುಂದುವರೆದು ಕ್ಷಿಪಣಿ ತಯಾರಿಕೆಯ ಉದಾಹರಣೆ ನೀಡುತ್ತಾರೆ. ಮಕ್ಕಳು ಸಂತೋಷ ಪಡುತ್ತಾರೆ.

ಇ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ 4x2=8

38) ಪೂರ್ಣಚಂದ್ರ ತೇಜಸ್ವಿಯವರ 'ಕೃಷ್ಣೇಗೌಡನ ಆನೆ' ನೀಳ್ಗತೆಯಲ್ಲಿ ಕೃಷ್ಣೇಗೌಡ ಬೇರೆ ಬೇರೆ ವ್ಯವಹಾರಗಳಲ್ಲಿ ನಷ್ಟ ಅನುಭವಿಸಿದ್ದನು. ಅನಂತರ ಗೂಳೂರು ಮಠದ ಹೆಣ್ಣಾನೆಯನ್ನು ಖರೀದಿ ಮಾಡಿ ಅದರ ಜೊತೆಗೆ ಮಾವುತ ವೇಲಾಯುಧನನ್ನು ಕರೆತಂದಾಗ ಜನರು ಇವನ ಕತೆ ಮುಗಿದಂತೆಯೇ ï ಆನೆ ಸಾಕುವುದೆಂದರೆ ಎಲೆಕ್ಷನ್ ಗೆ ನಿಂತ ಹಾಗೆ ಮತ್ತು ಹೆಂಡತಿ ಮಕ್ಕಳ ಬಾಯಿಗೆ ಮಣ್ಣು ಹಾಕುವ ಕ್ಷಿಪ್ರ ಮಾರ್ಗ ಎಂದು ನಂಬಿದ್ದರು ಆದರೆ ಆದದ್ದು ತದ್ವಿರುದ್ಧ. ಮಠದ ಒಣ ಹುಲ್ಲು ತಿಂದು ಸೊರಗಿದ್ದ ಆನೆಯನ್ನು ಬಯನೆ ಸೊಪ್ಪು, ಹಿಂಡಿ ಗೆಣಸು, ಇತರೆ ಒಳ್ಳೊಳ್ಳೆಯ ಆಹಾರವನ್ನು ಆನೆಗೆ ನೀಡಿ ಜನರ ನಿರೀಕ್ಷೆ ಸುಳ್ಳಾಗುವಂತೆ ಪಗಡುದಸ್ತಾಗಿ ಆನೆಯನ್ನು ಸಾಕಿದ.

39) ಕೃಷ್ಣೇಗೌಡನ ಆನೆ ನೀಳ್ಗತೆಯಲ್ಲಿ ನಿರೂಪಕರು ತಮ್ಮ ಊರಿನಲ್ಲಿ ಹುಚ್ಚು ನಾಯಿಗಳ ಹಾವಳಿ ಹೆಚ್ಚಾದಾಗ ಮುನಿಸಿಪಲ್ ಪ್ರಸಿಡೆಂಟ್ ಖಾನ್ ಸಾಹೇಬರನ್ನು ಭೇಟಿ ಮಾಡಿ ಹುಚ್ಚು ನಾಯಿ ನಿರ್ಮೂಲನಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ವಿಚಾರಿಸಿದಾಗ, ಖಾನ್ ಸಾಹೇಬರು ನೋಡಿ ಸ್ವಾಮಿ ನಾಯಿ ಕಂಡ್ರೆ ನಮಗೆ ಪ್ರೀತಿನಾ? ಅವು ನಮಗೆ ಹಂದಿಗಳಿಗೆ ಸಮ. ಅವನ್ನೆಲ್ಲಾ ಎರಾಡಿಕೇಟ್ ಮಾಡೋದಕ್ಕೆ ಕೈಲಾದ್ದನ್ನೆಲ್ಲಾ ಮಾಡಿದ್ದೇನೆ. ಶೂಟ್ ಮಾಡಿಸಿದ್ದೇನೆ, ಪಾಯ್ಸನ್ ತರಿಸಿ ಹಾಕಿಸಿದ್ದೇನೆ. ಈ ವರ್ಷ ಇನ್ನೂರು ಮುನ್ನೂರು ನಾಯಿನಾದರೂ ಸಾಯಿಸಿದ್ದೇವೆ ನೋಡಿ, ಅಲ್ಲದೆ ಮುನ್ಸಿಪಾಲಿಟಿ ಹದ್ದುಬಸ್ತಿನ ಒಳಗೆ ಇದ್ದರೆ ಮಾತ್ರ ನಾವು ಆಕ್ಷನ್ ತಗೋಬಹುದು ಎನ್ನುತ್ತಾರೆ.

40) ಫಾರೆಸ್ಟ್ ಅಧಿಕಾರಿ ನಾಗರಾಜನ ಸಾವಿನ ಬಗ್ಗೆ ಅನೇಕ ಊಹಾಪೋಹಗಳು ಹುಟ್ಟಿಕೊಂಡವು. ನಾಗರಾಜನಿಗೆ ಸಾರ್ವಜನಿಕ ಸಭೆಯಲ್ಲಾದ ಅವಮಾನ ತಾಳಿಕೊಳ್ಳಲಾರದೆ ಆತ್ಮಹತ್ಯೆ ಮಾಡಿಕೊಂಡನೆಂದೂ, ಮತ್ತೆ ಕೆಲವರು ಕೃಷ್ಣೇಗೌಡನ ಆನೆಯೇ ಅವನನ್ನು ಕಾಡಿನಲ್ಲಿ ಎಲ್ಲೋ ಒಂದು ಕಡೆ ಕೊಂದು ನೆಲಕ್ಕೆ ಹಾಕಿ ತಿಕ್ಕಿದೆ ಎಂದು ಶಂಕಿಸಿದ್ದರು. ನಾಗರಾಜನಿಗೆ ಇದ್ದಕ್ಕಿದ್ದಂತೆಯೇ ಮನ: ಪರಿವರ್ತನೆಯಾಗಿ ಕೋವಿ ಚರಂಡಿಗೆ ಎಸೆದು ಧರ್ಮಸ್ಥಳದ ಬಸ್ಸು ಹತ್ತಿದನೆಂದೂ, ತಲೆಬೋಳಿಸಿಕೊಂಡು ಧರ್ಮಸ್ಥಳದಲ್ಲಿ ಓಡಾಡುತ್ತಿರುವುದನ್ನು ತಾವು ಕಣ್ಣಾರೆ ಕಂಡೆವೆಂದು ಹೇಳಿದರು. ಮತ್ತೆ ಕೆಲವರು ನಾಗರಾಜ ಆನೆಯನ್ನು ಬೆನ್ನಟ್ಟಿ ಹಿಂದಿರುಗಿ ಬರುವಾಗ ಕಾರಿನಲ್ಲಿ ಬರುತ್ತಿದ್ದ ಕಳ್ಳಗಂಧಸಾಗಾಣಿಕೆಯ ಗಂಗಾಧರನ ಗ್ಯಾಂಗಿನವರು ಖೂನಿ ಮಾಡಿ ಹೆಣ ನಾಪತ್ತೆ ಮಾಡಿರಬಹುದೆಂದು ಹೇಳಿದರು. ಇವೆಲ್ಲಾ ನಾಗರಾಜನ ಸಾವಿನ ಬಗ್ಗೆ ಮೂಡಿದ ಅಭಿಪ್ರಾಯಗಳು.

## <u>'ಉ' ವಿಭಾಗ</u>

ಅ) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ. **5**x1=5

(ಕವಿ, ಕಾವ್ಯ, ಪದ್ಯ 01 ಅಂಕ–ಹಿನ್ನತಿ, ಭಾವಾರ್ಥ 03 ಅಂಕ–ವಿಶೇಷತೆ 01)

41) 'ರೂಪಕ ಸಾಮ್ರಾಜ್ಯದ ಚಕ್ರವರ್ತಿ' ಎನಿಸಿದ ಕವಿ 'ಕುಮಾರ ವ್ಯಾಸನ' 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಿಂದ ಆಯ್ದ "ಇನ್ನು ಹುಟ್ಟುದೆಯಿರಲಿ ನಾರಿಯರೆನ್ನವೊಲು" ಎಂಬ ಪದ್ಯದಿಂದ ಆಯ್ಕೆ ಮಾಡಿದೆ.

ಹಿನ್ನಲೆ:– ವಿರಾಟರಾಯನ ಅರಮನೆಯಲ್ಲಿ ಕೀಚಕನಿಂದ ಕಿರುಕುಳಕ್ಕೊಳಗಾದ ದ್ರೌಪದಿ ಯಾರಿಗೆ ತನ್ನ ನೋವನ್ನೆಲ್ಲಾ ಹೇಳಲಿ, ಯಾರು ಇದಕ್ಕೆ ಸಮರ್ಥರು ಎಂಬ ಚಿಂತೆಯಲ್ಲಿದ್ದ ಸಂದರ್ಭ.

ಭಾವಾರ್ಥ :– ಆಕೆಗೆ ಆ ಸಮಯದಲ್ಲಿ ಕಂಡದ್ದು ಎಲ್ಲಾ ವಿಚಾರದಲ್ಲಿಯೂ ಶೂರನಾದ ಭೀಮನೆ ಇದಕ್ಕೆ ಸಮರ್ಥನಾದ ಪೌರುಷವುಳ್ಳ ಗಂಡನು. ಬಹಳ ಸ್ವಾಭಿಮಾನಿಯಾದ ಅವನು ಮಾತ್ರ ಈ

ಕಾರ್ಯಕ್ಕೆ ಆಸಕ್ತಿ ವಹಿಸುತ್ತಾನೆ. ಈ ದುಷ್ಟ ಕೀಚಕನು ಕೊಡುವ ತೊಂದರೆಗಳನ್ನೆಲ್ಲಾ ಭೀಮನಿಗೆ ಹೇಳುತ್ತೇನೆ. ಆ ನಂತರ ಅವನಿಂದಲೂ ಉಪಯೋಗವಿಲ್ಲವೆಂದಾದರೆ ಭಯಂಕರವಾದ ವಿಷವನ್ನು ಕುಡಿಯುತ್ತೇನೆ. ಎಂಬ ನಿರ್ಧಾರಕ್ಕೆ ಬರುತ್ತಾಳೆ.

ವಿಶೇಷತೆ:– ಈ ಪದ್ಯದಲ್ಲಿ ದ್ರೌಪದಿಯ ಸಂಕಟ, ಭೀಮನ ಮೇಲಿನ ನಂಬಿಕೆ ಹಾಗೂ ಅವನ ಸಾಮರ್ಥ್ಯ ಮತ್ತು ಆಕೆಯ ಕೊನೆಯ ನಿರ್ಧಾರವನ್ನು ತಿಳಿಯಬಹುದು.

42) ‘ಜನಪದ ಲೋಕದ ಗಾರುಡಿಗ’ ಕವಿಯೆಂದೇ ಪ್ರಸಿದ್ದರಾದ ‘ದ.ರಾ.ಬೇಂದ್ರೆ’ಯವರ ‘ಮುಕ್ತಕಂಠ’ ಕವನ ಸಂಕಲನದಿಂದ ಆಯ್ದುಕೊಂಡ ‘ಬೆಳಗು ಜಾವ’ ಪದ್ಯಭಾಗದಿಂದ ಆಯ್ಕೆ ಮಾಡಿದೆ.

ಹಿನ್ನಲೆ:– ಪ್ರಕೃತಿಯಲ್ಲಿ ಅರುಣೋದಯದ ಸುಂದರ ಸೊಬಗಿನ ಸನ್ನಿವೇಶವನ್ನು ಪದ್ಯಗಳ ಮೂಲಕ ಚಿತ್ರಿಸುವ ಸಂದರ್ಭ.

ಭಾವಾರ್ಥ:– ರಾತ್ರಿ ವೇಳೆಯು ಮುಗಿಯುತ್ತಾ ಪೂರ್ವ ದಿಕ್ಕಿನಲ್ಲಿ ಮುಂಜಾವು ಮೂಡುತ್ತಿರುವ ಸುಖಸಮಯದಲ್ಲಿ ಮಕ್ಕಳು ಮರಿಯೆಲ್ಲಾ ಸುಖನಿದ್ರೆಯಲ್ಲಿ ಕನಸು ಕಾಣುತ್ತಿರುವಾಗಲೇ ಕೂಗೊಂದು ಕಿವಿಗೆ ಕೇಳಿ ಬಂತು, ಮಕ್ಕಳೇ ನೀವೆಲ್ಲಾ ಕೇಳಿರಿ ಬೇಗನೆ ಎದ್ದು ನಿತ್ಯದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳದೆ ಇನ್ನು ಏಕೆ ಕಳ್ಳನಿದ್ರೆಯಲ್ಲಿ ಮುಳುಗಿದ್ದೀರಾ, ಈ ಸುಖಕರ ತುಂಬಿದ ಜೀವನ (ಯೌವ್ವನ) ನಿಮಗೆ ಬಂದಿರುವಾಗ ಇದು ಇರುವಷ್ಟರಲ್ಲಿಯೇ ಇದನ್ನು ಹೆಚ್ಚು ಹೆಚ್ಚು ಅನುಭವಿಸಬೇಕು ಎಂಬ ಭಾವ .

ವಿಶೇಷತೆ:– ಮನುಷ್ಯ ಜೀವನದಲ್ಲಿ ಯೌವ್ವನ ಬರುವುದು ಒಂದೇ ಬಾರಿ ಮಾತ್ರ. ಅದು ಪುನಾರಾವರ್ತನೆಯಾಗುವುದಿಲ್ಲ. ಅದು ಬಂದಾಗ ಅದನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂಬ ಸಂದೇಶ ನೀಡಲಾಗಿದೆ.

## <u>ಭಾಷಾಭ್ಯಾಸ</u>

VI ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗನುಗುಣವಾಗಿ ಉತ್ತರಿಸಿ. 2x6=12

43) ಬಿತ್ತ = ಬೀಜ
ಗೆರಟ = ತೆಂಗಿನ ಚಿಪ್ಪು

44) ಅನಲ = ಬೆಂಕಿ, ಪಾವಕ, ಅಗ್ನಿ ಇತ್ಯಾದಿ
ಸಮರ = ಯುದ್ಧ, ಕಾಳಗ, ರಣ ಇತ್ಯಾದಿ

45) ಬಗೆ = ಅಗೆಯುವುದು, ಮನಸ್ಸು, ರೀತಿ ಇತ್ಯಾದಿ
ನರ = ಮನುಷ್ಯ, ರಕ್ತನಾಳ, ಅರ್ಜುನ ಇತ್ಯಾದಿ

46) ಕಾರ್ಮೋಡ ï ಕರಿ/ಕಪ್ಪು,
ದುರ್ಜನ ï ದುಷ್ಟ/ದುರ್

47) ಊರೂರು, ಮೆಲ್ಲಮೆಲ್ಲನೆ, ಹೆಜ್ಜೆಹೆಜ್ಜೆ ಇತ್ಯಾದಿ

48) ದಾರಿದೀಪ / (ಮಾರ್ಗದರ್ಶನ): ಗುರುಗಳು ನಮಗೆ ನೀಡಿದ ಹಿತವಚನಗಳು ನಮ್ಮ ಬದುಕಿಗೆ ದಾರಿದೀಪವಾಗಿವೆ.

ತಲೆಬಾಗು: (ಗೌರವಕೊಡು/ಶರಣಾಗು): ಹಿರಿಯರ ಅನುಭವ ಮಾತುಗಳಿಗೆ ನಾವು ತಲೆ ಬಾಗಬೇಕು.

(ವಿದ್ಯಾರ್ಥಿಗಳು ನುಡಿಗಟ್ಟಿನ ಅರ್ಥ ಕೆಡದಂತೆ ವಾಕ್ಯ ರಚಿಸಬಹುದು)

49) ಧರೆಯೊಳ್ – ಸಪ್ತಮಿ ವಿಭಕ್ತಿ,
ಗುಡಿಸಲಿನಿಂದ ï ತೃತೀಯ ವಿಭಕ್ತಿ,

ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ 5x1=05
(ಪೀಠಿಕೆ 01 ಅಂಕ, ವಿಷಯ ನಿರೂಪಣೆ 03 ಅಂಕಗಳು ಮುಕ್ತಾಯ 01 ಅಂಕ)

50) ಭೀಕರ ಬರಗಾಲ
ಪೀಠಿಕೆ; ಬರಗಾಲದ ಸ್ವರೂಪವನ್ನು ಕುರಿತ ಪ್ರಾಸ್ತಾವಿಕ ಅಂಶಗಳನ್ನು ಗಮನಿಸಿ
ವಿಷಯ ನಿರೂಪಣೆ: ಬರಗಾಲ ಉಂಟಾಗುವ ಬಗೆ, ಜನ ಜಾನುವಾರುಗಳ ಮೇಲೆ ಅದರಿಂದಾಗುವ ತಾಪತ್ರಯಗಳು, ಅದನ್ನು ನಿಭಾಯಿಸುವಲ್ಲಿ ಜನ, ಸಂಘಸಂಸ್ಥೆಗಳು, ಸರ್ಕಾರಗಳ ಪಾತ್ರ ಕುರಿತಂತೆ ಗಮನಿಸಿ
ಉಪಸಂಹಾರ: ವಿದ್ಯಾರ್ಥಿಗಳ ಪಾತ್ರ, ಸಲಹೆ ಸೂಚನೆ ಮೂಲಕ ಮುಕ್ತಾಯ.
(ಮೌಲ್ಯಮಾಪಕರ ವಿವೇಚನೆಗೆ ಬಿಡಲಾಗಿದೆ)

51) ಪರಿಸರ ಸಂರಕ್ಷಣೆ
ಪೀಠಿಕೆ: ಪರಿಸರ ಎಂದರೇನು? ಪ್ರಾಸ್ತಾವಿಕ ಅಂಶಗಳನ್ನು ಗಮನಿಸಿ

ವಿಷಯ ವಿವರಣೆ: ಮಲಿನಗೊಂಡಿರುವ ಪರಿಸರವನ್ನು ಸಂರಕ್ಷಿಸಲು ಕೈಗೊಳ್ಳಬೇಕಾದ ವಿವಿಧ ಆಯಾಮಗಳನ್ನು ಕುರಿತು ವಿವರಣಾತ್ಮಕವಾಗಿ ಬರೆದಿರುವ ಬಗ್ಗೆ ಗಮನಿಸಿ.

ಉಪಸಂಹಾರ: ಸೂಕ್ತಿ, ಸುಭಾಷಿತಗಳ ಮೂಲಕ ಉಪಸಂಹಾರವನ್ನು ಬರೆದಿರುವ ಬಗ್ಗೆ ಗಮನಿಸಿ.

(ಮೌಲ್ಯಮಾಪಕರ ವಿವೇಚನೆಗೆ ಬಿಡಲಾಗಿದೆ)

ಇ) ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. 4x1=4
(ಆರಂಭ 01 ಅಂಕ, ಒಡಲು 02 ಅಂಕಗಳು ಮುಕ್ತಾಯ 01 ಅಂಕ)

52) ವ್ಯವಹಾರಿಕ ಪತ್ರದ ವಿವಿಧ ಅಂಶಗಳು.

ಇವರಿಂದ, ಇವರಿಗೆ, ಗೌರವಪೂರ್ವಕ ಸಂಬೋಧನೆ, ಪತ್ರದ ವಿಷಯ, ಪತ್ರದ ಒಡಲು, ಮುಕ್ತಾಯದ ಕೊನೆಯಲ್ಲಿ ಗೌರವ ಸೂಚಿಸುವುದು, ಸಹಿ, ದಿನಾಂಕ, ಸ್ಥಳಗಳನ್ನು ಗಮನಿಸಬೇಕು.

53) ವೈಯುಕ್ತಿಕ ಪತ್ರ

ದಿನಾಂಕ, ಸೂಕ್ತಸಂಬೋಧನೆ, ಆತ್ಮೀಯ ನಿರೂಪಣೆ, ಪ್ರೀತಿಪೂರ್ವಕ ಮುಕ್ತಾಯ, ಸಹಿ ಹೊರ ವಿಳಾಸ ಇತ್ಯಾದಿ ಗಮನಿಸುವುದು.

ಈ) ಈ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 4x1=4
(ಪೀಠಿಕೆ 01, ವಿವರಣೆ 02 ಅಂಕಗಳು, ಆಶಯ 01 ಅಂಕ)

54) ಮನಸ್ಸಿದ್ದರೆ ಮಾರ್ಗ

55) ತಾಳಿದವನು ಬಾಳಿಯಾನು

ಗಾದೆ ಪದದ ನಿಷ್ಪತ್ತಿ, ಅರ್ಥ ಗಮನಿಸಿ :

ಗಾದೆಯ ವಿಷಯ ಸ್ಪಷ್ಟವಾಗಲು ಒಂದು ಉದಾಹರಣೆಯ ಮೂಲಕ ವಿಷಯವನ್ನು ಸ್ಪಷ್ಟ ಪಡಿಸಿರುವುದನ್ನು ಗಮನಿಸಿ ಜೊತೆಗೆ ಮುಕ್ತಾಯದಲ್ಲಿ ಇದೇ ಅರ್ಥ ಬರುವ ಗಾದೆಗಳನ್ನು ಸೂಚಿಸಿರುವುದು, ಗಾದೆಯ ಮೂಲಕ ಯಾವ ಸಂದೇಶ ವ್ಯಕ್ತವಾಗಿರುವುದನ್ನು ಗಮನಿಸಿ.

(ಇತರ ವಿಷಯಗಳು, ಮೌಲ್ಯಮಾಪಕರ ವಿವೇಚನೆಗೆ ಬಿಡಲಾಗಿದೆ)

-----